1) ಸುರತ್ಕಲ್ ಕ್ಷೇತ್ರದ ಕಾಟಿಪಾಳ್ಯದಲ್ಲಿ ಅಂಬೇಡ್ಕರ್ ವಸತಿ ಯೋಜನೆಯಲ್ಲಿ ನಿರ್ಮಿಸಲಾದ ಮನೆಗಳ ಪೈಕಿ 8 ಮನೆಗಳನ್ನು ಫಲಾನುಭವಿಗಳಿಗೆ ಒದಗಿಸಲಾಗಿದೆ. ಇನ್ನು 29 ಫಲಾನುಭವಿಗಳಿಗೆ ಮನೆಗಳನ್ನು ಒದಗಿಸಬೇಕಾಗಿರುತ್ತದೆ.

ವಿಷಯ:- ರಾಜ್ಯ ಸಾರಿಗೆ ಸಂಸ್ಥೆಯ ನಷ್ಟ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 557 (1255)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಷ್ಟ ಅನುಭವಿಸುತ್ತಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಪ್ರಮುಖ ಕಾರಣಗಳಾವುವು?

ಇ) ಇದನ್ನು ತಪ್ಪಿಸಲು ಸಂಸ್ಥೆ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):-

ಅ) ಹೌದು.

ಆ) ಸಂಸ್ಥೆಯ ನಷ್ಟಕ್ಕೆ ಸಂಬಂಧಿಸಿದ ಹಲವು ಪ್ರಮುಖ ಕಾರಣಗಳು ಈ ಕೆಳಕಂಡಂತೆ ಇರುತ್ತದೆ.

1) ವಿದ್ಯಾರ್ಥಿಗಳೂ ಸೇರಿದಂತೆ ವಿವಿಧ ಪ್ರಯಾಣಿಕ ವರ್ಗಕ್ಕೆ ಸಾರಿಗೆ ದರಗಳಲ್ಲಿ ರಿಯಾಯಿತಿಯನ್ನು ನೀಡಿರುವುದರಿಂದ ಸಾರಿಗೆ ಆದಾಯದಲ್ಲಿ ಸಂಭವಿಸುತ್ತಿರುವ ಕಡಿತ.

2) ಇಂಧನ, ಟೈರುಗಳು, ಟ್ಯೂಬುಗಳು, ಬಿಡಿ ಭಾಗಗಳು ಮತ್ತು ಇತರೆ ಬಳಕೆ ಸಾಮಗ್ರಿಗಳ ಬೆಲೆಗಳಲ್ಲಿ ಕಾಲಕಾಲಕ್ಕೆ ಆಗಿರುವ ಹೆಚ್ಚಳ.

3) ಅಧಿಕ ಬಡ್ಡಿಯ ಹೊರೆ

4) ಕಾಲಕಾಲಕ್ಕೆ ಸಂಭವಿಸುತ್ತಿರುವ ವೇತನ ಪರಿಷ್ಕರಣೆ

5) ಇಂಧನ, ಟೈರುಗಳು, ಬಿಡಿ ಭಾಗಗಳು ಮುಂತಾದವುಗಳ ಬೆಲೆಗಳಲ್ಲಿ ಹೆಚ್ಚಳ ಉಂಟಾದಾಗಲೆಲ್ಲ ಪ್ರಯಾಣದ ದರಗಳನ್ನು ಪರಿಷ್ಕರಿಸಲು ಸಾಧ್ಯವಾಗದೆಯಿರುವಿಕೆ.

ಇ) ನಷ್ಟವನ್ನು ಕಡಿಮೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಸಂಸ್ಥೆಯು ತೆಗೆದುಕೊಂಡಿದೆ ಮತ್ತು ತೆಗೆದುಕೊಳ್ಳಲಾಗುತ್ತಿದೆ.

1)ಮಾರ್ಗಗಳ ಕಾರ್ಯಾಚರಣೆಯನ್ನು ಪುನಃ ರಚಿಸುವ ಮೂಲಕ ಆದಾಯವನ್ನು ಹೆಚ್ಚಿಸಿಕೊಳ್ಳುವುದು.

2)ಸೋರುವಿಕೆಯನ್ನು ತಡೆಗಟ್ಟಲು ವಾಹನ ತನಿಖೆಯನ್ನು ಚುರುಕುಗೊಳಿಸುವುದು.

3)ಪ್ರತಿ ಕಿ.ಮೀ.ಗೆ ತಗಲುವ ಇಂಧನ, ಟೈರುಗಳ ಬಳಕೆ, ವಾಹನ ಬಳಕೆ, ಚಾಲಕ ಮತ್ತು ನಿರ್ವಾಹಕರ ಬಳಕೆ ಮುಂತಾದ ಭೌತಿಕ ಕಾರ್ಯಚರಣೆಯಲ್ಲಿ ಸುಧಾರಣೆ.

4)ಬಡ್ತಿಯ ಮೇಲಿನ ಹೊಣೆಗಾರಿಕೆಯನ್ನು ಕಡಿಮೆಗೊಳಿಸಲು ಉಳಿಕೆ ಬಂಡವಾಳವನ್ನು ಈಕ್ವಿಟಿಯಾಗಿ ಪರಿವರ್ತಿಸಲು ಕೇಳಿಕೊಳ್ಳುವುದು.

6)ಬಳಕೆಗೆ ಅನುಗುಣವಾಗಿ ಸಾಮಗ್ರಿಗಳ ದಾಸ್ತಾನನ್ನು ಹೊಂದಿ ಸಾಮಗ್ರಿಗಳ ಶೇಖರಣೆಯ ಮೇಲೆ ನಿಗಾ ಇರಿಸುವಿಕೆ.

7)ಸಾಲಗಳ ಮೇಲೆ ಅವಲಂಬನೆಯನ್ನು ಕಡಿಮೆ ಮಾಡಿ ತನ್ಮೂಲಕ ಬಡ್ಡಿಯ ಹೊರೆಯನ್ನು ಕಡಿಮೆ ಮಾಡುವಿಕೆ.

ವಿಷಯ:- ಕೃಷಿ ಸಹಾಯಕರ ಹುದ್ದೆಗಳ ಖಾಲಿ ಇರುವುದರಿಂದ ರೈತರಿಗೆ ತೊಂದರೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 559 (1257)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಕೃಷಿ ಸಚಿವರು ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಸಹಾಯಕರ ಹುದ್ದೆಗಳು ಹೆಚ್ಚಿನ ಸಂಖ್ಯೆಗಳಲ್ಲಿ ಖಾಲಿ ಇರುವುದರಿಂದ ಕೃಷಿ ಇಲಾಖೆ ಮತ್ತು ರೈತನ ಮಧ್ಯೆ ಅಂತರ ಹೆಚ್ಚಿದ್ದು ಆ ರೈತನಿಗೆ ಸರ್ಕಾರದವರು ಸವಲತ್ತುಗಳ ಮಾಹಿತಿ ಮತ್ತು ಕೃಷಿ ಮತ್ತು ಕೃಷಿ ತಾಂತ್ರಿಕತೆಯ ಕೊರತೆ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮವೇನು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):-

ಅ) ಹೌದು.

ಆ) ದಿನಾಂಕ : 31-5-95 ರ ಸರ್ಕಾರದ ಆದೇಶದ ಮೂಲಕ ಕೃಷಿ ಇಲಾಖೆಯನ್ನು ಪುನರ್ ರಚಿಸಲಾಗಿದೆ. ಇದರಿಂದಾಗಿ ಕೃಷಿ ಸಹಾಯಕರ ಮತ್ತು ಸಹಾಯಕ ಕೃಷಿ ಅಧಿಕಾರಿಗಳ ಕಾರ್ಯವ್ಯಾಪ್ತಿಗಳ ಕ್ಷೇತ್ರ ಕಡಿಮೆಯಾಗಿದೆ. ಈಗ ಕೃಷಿ ಸಹಾಯಕರ ಕಾರ್ಯವ್ಯಾಪ್ತಿ ಒಂದು ಗ್ರಾಮ ಪಂಚಾಯತ್ ಮಾತ್ರ. ಅಲ್ಲದೆ ಕೃಷಿ ಸಹಾಯಕರು ಗ್ರಾಮ ಪಂಚಾಯತ್ ಕಛೇರಿಯಲ್ಲಿಯೇ ತಮ್ಮ ಕಛೇರಿ ಸ್ಥಾಪಿಸಿಕೊಂಡು ಕಾರ್ಯ ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ. ಬೆಳೆ ಸಂಗೋಪನೆ ಹಾಗೂ ಭೂಸಾರ ಸಂರಕ್ಷಣೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಒಬ್ಬರೇ ಕೃಷಿ ಸಹಾಯಕರು ಕಾರ್ಯರೂಪಕ್ಕೆ